No:Compt/Uplok/BCD-2406/2021/ARLO-1

**ಕರ್ನಾಟಕ ಲೋಕಾಯುಕ್ತ, ಬೆಂಗಳೂರು.**

ಸಂಖ್ಯೆ:ಕಂಪ್ಲೆಂಟ್/ಉಪಲೋಕ್/ಬಿಸಿಡಿ–2406/2021/ಎ.ಆರ್.ಎಲ್.ಒ–1. ದಿನಾಂಕ:17–05–2022.

**ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ರ ಕಲಂ 12(1) ರನ್ವಯ ವರದಿ**

**ವಿಷಯ:–** ದೂರುದಾರರಾದ ಶ್ರೀಮತಿ ಪಿಳ್ಳರತ್ನಮ್ಮ, ಬೆಂಗಳೂರು ರವರಿಗೆ ಬೆಂಗಳೂರು ಪೂರ್ವ ತಾಲ್ಲೂಕ್, ವರ್ತೂರು ಹೋಬಳಿ, ಗುಂಜೂರು ಗ್ರಾಮದ ಸರ್ವೆ ನಂ:271/2 ರ ಜಮೀನಿನ ಐ.ಎಲ್. ಮತ್ತು ಆರ್.ಆರ್.1702 ರ ನಕಲು ಪ್ರತಿಯನ್ನು ಒದಗಿಸಲು ಕ್ರಮ ಕೈಗೊಳ್ಳುವ ಬಗ್ಗೆ.

******

ಶ್ರೀಮತಿ ಪಿಳ್ಳರತ್ನಮ್ಮ ಕೋಂ ಟಿ. ಮುನಿಯಪ್ಪ, ನಂ:321, 10ನೇ ಮುಖ್ಯ, 4ನೇ ಬ್ಲಾಕ್, ನಂದಿನಿ ಲೇಔಟ್, ಬೆಂಗಳೂರು (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು (1) ಶ್ರೀ ಎಸ್. ಅಜೀತ್ ಕುಮಾರ್ ರೈ, ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕ್, ಕೃಷ್ಣರಾಜಪುರ, ಬೆಂಗಳೂರು ಮತ್ತು (2) ಶ್ರೀ ಇರ್ಫಾನ್ ಉಲ್ಲಾ ಖಾನ್, ದ್ವಿತೀಯ ದರ್ಜೆ ಸಹಾಯಕರು, ತಹಶೀಲ್ದಾರ್ ರವರ ಕಛೇರಿ, ಬೆಂಗಳೂರ ಪೂರ್ವ ತಾಲ್ಲೂಕ್, ಕೃಷ್ಣರಾಜಪುರ, ಬೆಂಗಳೂರು (ಇನ್ನು ಮುಂದೆ '1 ಮತ್ತು 2ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರುಗಳ ವಿರುದ್ದ ಬೆಂಗಳೂರು ಪೂರ್ವ ತಾಲ್ಲೂಕ್, ವರ್ತೂರು ಹೋಬಳಿ, ಗುಂಜೂರು ಗ್ರಾಮದ ಸರ್ವೆ ನಂ:271/2 ರ ಜಮೀನಿನ ಐ.ಎಲ್. ಮತ್ತು ಆರ್.ಆರ್.1702 ರ ನಕಲು ಪ್ರತಿಯನ್ನು ನೀಡುವ ಕುರಿತು ಕ್ರಮ ಜರುಗಿಸುವಂತೆ ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. <u>ದೂರಿನ ಸಂಕ್ಷಿಪ್ತ ವಿವರಗಳು</u>:- ದೂರುದಾರರ ಆಪಾದನೆ ಏನೆಂದರೆ ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಗುಂಜೂರು ಗ್ರಾಮದ ಸರ್ವೆ ನಂ. 271/2 ರ ಜಮೀನಿನ ಐ.ಎಲ್. ಮತ್ತು ಆರ್.ಆರ್ 1702 ರ ನಕಲು ಪ್ರತಿಯನ್ನು 1ನೇ ಎದುರುದಾರರಾದ ಕೆ.ಆರ್. ಪುರಂ ತಹಶೀಲ್ದಾರ್ ನೀಡಿರುವುದಿಲ್ಲ. ಕಛೇರಿಯ ರೆಕಾರ್ಡ್ ರೂಮಿನಲ್ಲಿ ತಮಗೆ ಶ್ರೀ ತಾಯಪ್ಪನ ಕೇಸಿನಲ್ಲಿರುವ ಪ್ರತಿಗಳು ಹಾಗೂ ಶ್ರೀ ಚಿಕ್ಕರಂಗಪ್ಪನ ಹೆಸರಿನಲ್ಲಿರುವ ಹಳೆಯ ಐ.ಎಲ್ ಮತ್ತು ಆರ್.ಆರ್. 1702ರ ನಕಲು ಪ್ರತಿಗಳನ್ನು ಕೊಡುತ್ತಿಲ್ಲ. ಕೇಳಿದರೆ ಲಭ್ಯವಿಲ್ಲ ಹರಿದು ಹೋಗಿದೆ ಎಂದು ತಹಶೀಲ್ದಾರ್‌ರವರು ಹೇಳುತ್ತಾರೆ. ತಾಲ್ಲೂಕು ಕಛೇರಿಯ ರೆಕಾರ್ಡ್ ರೂಮಿನ ಶ್ರೀ ಇಮ್ರಾನ್‌ರವರಿಗೆ ಎಷ್ಟು ಬೇಡಿದರೂ ಕೊಡುತ್ತಿಲ್ಲವೆಂದು ಹೇಳಿಕೊಂಡಿರುತ್ತಾರೆ. ಇನ್ನುಳಿದ ದೂರಿನ ಅಂಶಗಳು ಅಸ್ಪಷ್ಟವಾಗಿದ್ದು ಸರಿಯಾದ ಅರ್ಥ ನೀಡುತ್ತಿಲ್ಲದಿರುವುದು ಕಂಡುಬರುತ್ತದೆ.

3. ದೂರುದಾರರು ತಮ್ಮ ದೂರಿನೊಂದಿಗೆ ಆರ್.ಟಿ.ಸಿ ಪ್ರತಿಗಳು ಹಾಗೂ ತಹಶೀಲ್ದಾರರು ನೀಡಿರುವ ದಿನಾಂಕ:31.12.2018ರ ಪತ್ರವನ್ನು ಹಾಜರು ಪಡಿಸಿರುತ್ತಾರೆ.

4. 1ನೇ ಎದುರುದಾರರು ಗೌರವಾನ್ವಿತರ ಆದೇಶದಂತೆ ತಮ್ಮ ದಿನಾಂಕ: 21.03.2022ರ ಪ್ರಮಾಣ ಪತ್ರವನ್ನು ಸಲ್ಲಿಸಿ ತಮ್ಮ ಪ್ರಮಾಣ ಪತ್ರದಲ್ಲಿ ದಾಖಲೆಗಳು ಪರಿಶೀಲಿಸಿದಾಗ ಪಿಳ್ಳರತ್ನಮ್ಮ ಎನ್ನುವವರು ಆರ್.ಟಿ.ಐ ಕಾಯ್ದೆಯಡಿಯಲ್ಲಿ ದಿನಾಂಕ 13.12.2018ರಂದು ಗುಂಜೂರು ಗ್ರಾಮ ವರ್ತೂರು ಹೋಬಳಿಯಲ್ಲಿನ ಸರ್ವೆ ನಂ. 271/2ರ ಸ್ವತ್ತಿಗೆ ಸಂಬಂಧಪಟ್ಟ ದಾಖಲೆಗಳನ್ನು ನೀಡುವಂತೆ ಕೋರಿರುತ್ತಾರೆ. ಸದರಿ ದಾಖಲೆಗಳು ಶಿಥಿಲಗೊಂಡಿರುವುದರಿಂದ ಹಿಂಬರಹ ನೀಡಲಾಗಿದೆ. ಹೀಗಿದ್ದರೂ ಸಹ ಪಿಳ್ಳರತ್ನಮ್ಮರವರು ಪ್ರಸ್ತುತ ದೂರನ್ನು ಸಲ್ಲಿಸಿರುತ್ತಾರೆ ಎಂದು ಹೇಳಿರುತ್ತಾರೆ ಮತ್ತು ಈ ಪ್ರಾಧಿಕಾರದ ಮೌಖಿಕ ಆದೇಶದ ಮೇರೆಗೆ ಮತ್ತೊಮ್ಮೆ ಪ್ರಕರಣದ ಬಗ್ಗೆ ಪರಿಶೀಲಿಸಿ ದಿನಾಂಕ:03.01.2022ರಂದು ಈಗಾಗಲೇ ವರದಿಯನ್ನು ಲಭ್ಯವಿರುವ

ದಾಖಲೆಗಳೊಂದಿಗೆ ಸಲ್ಲಿಸಿರುವುದಾಗಿ ಹೇಳಿಕೊಂಡಿರುತ್ತಾರೆ ಮತ್ತು ಸದರಿ ಸ್ವತ್ತಿಗೆ ಸಂಬಂಧಪಟ್ಟ ಋಣಭಾರ ಪತ್ರವನ್ನು ಉಪನೊಂದಣಾಧಿಕಾರಿಯವರ ಕಛೇರಿಯಿಂದ ಪಡೆದು ಶ್ರೀಮತಿ ಪಿಳ್ಳರತ್ನಮ್ಮ ರವರಿಗೆ ಕಳುಹಿಸಲಾಗಿದೆ ಎಂದು ಹೇಳಿಕೊಂಡು, ಪಿಳ್ಳರತ್ನಮ್ಮರವರು 17.02.2022ರಂದು ಆರ್.ಆರ್ ವಹಿಗಳು ಇವೆ ಎಂದು ಹಿಂದಿನ ಆರ್.ಆರ್ ಶಿರಸ್ತೆದಾರ್ ಭಾನುವಾರದಂದು ದೂರವಾಣಿಯ ಮುಖಾಂತರ ತಿಳಿಸಿದರು ಎಂಬುದಕ್ಕೆ ಕುರಿತು ಸದರಿ ಧನಂಜಯ ರವರಿಗೆ ನೋಟೀಸು ನೀಡಿರುವುದಾಗಿ ಹೇಳಿಕೊಂಡಿರುತ್ತಾರೆ. ಪಿಳ್ಳರತ್ನಮ್ಮರವರ ಸಮಕ್ಷಮವೇ ದಾಖಲೆಗಳನ್ನು ರೆಕಾರ್ಡ್ ರೂಮಿನಲ್ಲಿ ಪರಿಶೀಲಿಸಿದಾಗಿ ಸದರಿ ದಾಖಲೆಗಳು ಲಭ್ಯವಿರುವುದಿಲ್ಲ ಎಂದು ಖಾತರಿ ಮಾಡಿಕೊಂಡಿರುವುದಾಗಿ ಹೇಳಿಕೊಂಡಿರುತ್ತಾರೆ. 1ನೇ ಎದುರುದಾರರು ತಮ್ಮ ದಿನಾಂಕ: 03.01.2022ರ ವರದಿಯೊಂದಿಗೆ ಪಿಳ್ಳರತ್ನಮ್ಮರವರಿಗೆ ಕಳುಹಿಸಲಾಗಿದೆ ಎನ್ನುವ ದಾಖಲೆಗಳ ಪ್ರತಿಗಳನ್ನು ಹಾಜರು ಪಡಿಸಿರುತ್ತಾರೆ ಹಾಗೂ ತಮ್ಮ ವರದಿಯಲ್ಲಿ ಗೌರವಾನ್ವಿತರ ಆದೇಶದಂತೆ ಗುಂಜೂರು ಗ್ರಾಮದ ಸರ್ವೆ ನಂ. 271/2ರ ಜಮೀನಿಗೆ ಸಂಬಂಧಿಸಿದಂತೆ ಐ.ಎಲ್.ಆರ್.ಆರ್. ನಂ. 1702ರ ವಹಿಯು ಸಂಪೂರ್ಣವಾಗಿ ಶಿಥಿಲಗೊಂಡಿದ್ದು ಅಪೇಕ್ಷಿಸಿದ್ದಲ್ಲಿ ಸದರಿ ದಸ್ತಾವೇಜು ದಾಖಲೆಗಳನ್ನು ಗೌರವಾನ್ವಿತರ ಸಮಕ್ಷಮದಲ್ಲಿ ಪರಿಶೀಲಿಸಲು ಹಾಜರು ಪಡಿಸಲಾಗುವುದೆನ್ನುವ ದಿನಾಂಕ: 18.10.2021ರ ಪತ್ರದ ವರದಿಯನ್ನು ಉಲ್ಲೇಖಿಸಿರುತ್ತಾರೆ. ಸದರಿ ಸರ್ವೆ ನಂ. 272/2ರ ಜಮೀನಿಗೆ ಸಂಬಂಧಿಸಿದಂತೆ ಆರ್.ಆರ್.ಟಿ(1)ಸಿಆರ್.569/2006–07ರ ಹಾಗೂ ಆರ್.ಆರ್.ಟಿ(1)ಸಿಆರ್.543/2007–08ರ ಕಡತದಲ್ಲಿ ಐ.ಎಲ್. ಪ್ರತಿಯ ಜೆರಾಕ್ಸ್ ಲಭ್ಯವಿರುತ್ತದೆ ಕಡತದಲ್ಲಿರುವ ಎಲ್ಲಾ ದಾಖಲೆಗಳನ್ನು ಪತ್ರದೊಂದಿಗೆ ಲಗತ್ತಿಸಿದೆ ಹಾಗೂ ಸದರಿ ಜಮೀನಿಗೆ ಸಂಬಂಧಿಸಿ ಈತಹಲ್‌ವರೆಗಿನ ವಹಿವಾಟಾಗಿರುವ ಬಗ್ಗೆ ಋಣಭಾರ ರಾಹಿತ್ಯ ಪ್ರಮಾಣ ಪತ್ರಗಳನ್ನು ಉಪನೊಂದಣಾಧಿಕಾರಿಗಳು ರವರಿಂದ ದೃಢೀಕೃತ ಪ್ರತಿಗಳನ್ನು ಪಡೆದು ದೂರುದಾರರಿಗೆ ಕಳುಹಿಸಿರುವುದಾಗಿ ಹೇಳಿರುತ್ತಾರೆ ಹಾಗೂ ದಾಖಲಾತಿಗಳ ಪ್ರತಿಗಳನ್ನು ಸಲ್ಲಿಸಿರುತ್ತಾರೆ.

5. 2ನೇ ಎದುರುದಾರರು ತಮ್ಮ ದಿನಾಂಕ:18.10.2021ರ ಆಕ್ಷೇಪಣೆಯಲ್ಲಿ ದೂರುದಾರರು ಕೋರಿರುವ ಸರ್ವೆ ನಂ. 271/2ರ ಜಮೀನಿನ ಐ.ಎಲ್.ಆರ್.ಆರ್ ಸಂಖ್ಯೆ 1702ರ ನಕಲು ನೀಡಲು ಕೋರಿರುವುದಕ್ಕೆ ಕುರಿತು ಐ.ಎಲ್.ಆರ್.ಆರ್ ವಹಿಯು ಲಭ್ಯವಿದ್ದು ಶಿಥಿಲವಾಗಿರುತ್ತದೆ ಆದ ಕಾರಣ ನಕಲು ನೀಡಲು ರಹಾ ಇರುವುದಿಲ್ಲ ಎಂದು ಪತ್ರದ ಮೂಲಕ ದೂರುದಾರರಿಗೆ ತಿಳಿಸಿರುವುದಾಗಿ ಕೋರಿಕೊಂಡಿರುತ್ತಾರೆ. ತಮ್ಮ ಕಚೇರಿಯಿಂದ ನೀಡಿರುವ ಹಿಂಬರಹದಾರರಿಗೂ ಹಾಗೂ ಪಿಳ್ಳರತ್ನಮ್ಮರವರ ಪ್ರಸ್ತುತ ದೂರಿಗೂ ಯಾವುದೇ ಸಂಬಂಧ ಇರುವುದಿಲ್ಲ. ಸಂಪೂರ್ಣವಾಗಿ ಶಿಥಿಲಗೊಂಡ ದಾಖಲೆಗಳನ್ನು ಗೌರವಾನ್ವಿತರು ಅಪೇಕ್ಷಿಸಿದಲ್ಲಿ ಪರಿಶೀಲಿಸಲು ಹಾಜರುಪಡಿಸಲಾಗುವುದೆಂದು ಹೇಳಿಕೊಂಡಿರುತ್ತಾರೆ ಹಾಗೂ ದೂರುದಾರರ ಆಪಾದನೆಗಳೆಲ್ಲ ಸುಳ್ಳು ಎಂದು ಅಲ್ಲಗಳೆದಿರುತ್ತಾರೆ.

6. 1ನೇ ಎದುರುದಾರರ ತಮ್ಮ ದಿನಾಂಕ: 11.04.2022ರ ಪ್ರಮಾಣ ಪತ್ರದೊಂದಿಗೆ ಶ್ರೀ ಧನಂಜಯ್ ರವರು ತಮ್ಮ ನೋಟೀಸಿಗೆ ನೀಡಿರುವ ದಿನಾಂಕ: 21.03.2022ರ ಉತ್ತರದ ಪ್ರತಿಯನ್ನು ಹಾಜರುಪಡಿಸಿರುತ್ತಾರೆ. ಶ್ರೀ ಬಿ.ಎಂ. ಧನಂಜಯ ರವರು ತಮ್ಮ ದಿನಾಂಕ: 21.03.2022ರ ತಹಶೀಲ್ದಾರ್‌ರವರಿಗೆ ನೀಡಿರುವ ಉತ್ತರದಲ್ಲಿ ತಾವು ಬೆಂಗಳೂರು ಪೂರ್ವ ತಾಲ್ಲೂಕು ಕಛೇರಿಯಲ್ಲಿ ಆಗಸ್ಟ್ 2017 ರಿಂದ ಜುಲೈ 2019ರವರೆಗೆ ಹಕ್ಕು ದಾಖಲೆ ಶಿರಸ್ತೆದಾರರಾಗಿ ಕಾರ್ಯ ನಿರ್ವಹಿಸುತ್ತಿದ್ದು ಆ ಅವಧಿಯಲ್ಲಿ ತಾವು ಅಭಿಲೇಖಾಲಯಕ್ಕೆ ಸಂಬಂಧಿಸಿದ ನಕಲುಗಳನ್ನು ದೃಢೀಕರಿಸಿರುವುದಿಲ್ಲ ಅದರ ನಿರ್ವಹಣೆ ಬೇರೆ ಶಿರಸ್ತೆದಾರ್ ನಿರ್ವಹಿಸುತ್ತಿದ್ದು ದಿನಾಂಕ: 25.07.2018ರಂದು ತಹಶೀಲ್ದಾರ್‌ರವರ ಪರವಾಗಿ ನೀಡಿರುವ ಹಿಂಬರಹದಂತೆ ಸರ್ವೆ ನಂ.271/1 ಮತ್ತು 271/2ರ ಜಮೀನಿಗೆ ಸಂಬಂಧಿಸಿದ ಐ.ಎಲ್ ಮತ್ತು ಆರ್.ಆರ್. ನಂ 1702 ರ ವಹಿಯು ಲಭ್ಯವಿದ್ದು ಶಿಥಿಲಗೊಂಡಿರುತ್ತದೆ ಎಂಬುದು ಕಂಡುಬರುತ್ತದೆ ಎಂದು ಹೇಳಿಕೊಂಡಿರುತ್ತಾರೆ.

7. ಸದರಿ ಬಿ.ಎಂ. ಧನಂಜಯ ರವರು ತಮ್ಮ ಮುಂದುವರೆದ ಪತ್ರದಲ್ಲಿ ದೂರುದಾರರು ಆಗಿಂದಾಗ್ಗೆ ತಮ್ಮನ್ನು ದೂರವಾಣಿಯ ಮೂಲಕ ಸಂಪರ್ಕಿಸಿ ನಕಲು ಕಾಪಿ ನೀಡಲು ಅಭಿಲೇಖಾಲಯದ ವಿಷಯ ನಿರ್ವಾಹಕರಿಗೆ ತಿಳಿಸುವಂತೆ ಕೋರುತ್ತಿದ್ದು ಈ ಬಗ್ಗೆ ಇದಕ್ಕೆ ಸಂಬಂಧಪಟ್ಟ ಶಿರಸ್ತೇದಾರರು ಬೇರೆ ಇರುವುದರಿಂದ ಅವರನ್ನು ಸಂಪರ್ಕಿಸಿ ಮಾಹಿತಿ ಪಡೆದುಕೊಳ್ಳುವಂತೆ ಆಗಿಂದಾಗ್ಗೆ ತಿಳಿಸಲಾಗಿತ್ತು ಅದನ್ನೇ ದೂರುದಾರರು ದುರುಪಯೋಗ ಪಡಿಸಿಕೊಂಡು ತಮ್ಮ ವಿರುದ್ಧ ಲೋಕಾಯುಕ್ತದಲ್ಲಿ ನೀಡಿರುವ ದೂರಿನಲ್ಲಿ ತಮ್ಮ ಹೆಸರನ್ನು ಬಳಸಿ ಹೇಳಿಕೆ ನೀಡಿರುವುದು ಸತ್ಯಕ್ಕೆ ದೂರವಾಗಿದ್ದು, ಅಭಿಲೇಖಾಲಯದಲ್ಲಿ ದಾಖಲೆ ನೀಡುವ ವಿಷಯಕ್ಕೂ ಹಾಗೂ ತಮಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದು ಹೇಳಿಕೊಂಡಿರುತ್ತಾರೆ.

8. ದೂರುದಾರರ ದೂರಿನ ಅಂಶಗಳು, ಎದುರುದಾರರ ಆಕ್ಷೇಪಣೆ ಹಾಗೂ ದಾಖಲೆಗಳನ್ನು ಪರಿಶೀಲಿಸಿದಾಗ, ದೂರುದಾರರು 1ನೇ ಎದುರುದಾರರ ಕಛೇರಿಗೆ ಬೆಂಗಳೂರು ಪೂರ್ವ ತಾಲ್ಲೂಕು ವರ್ತೂರು ಹೋಬಳಿ ಗುಂಜೂರು ಗ್ರಾಮದ ಸರ್ವೆ ನಂ.271/2ರ ಜಮೀನಿನ ಐ.ಎಲ್.ಆರ್.ಆರ್. 1702 ರ ನಕಲು ಪ್ರತಿಯನ್ನು ನೀಡುವಂತೆ ಅರ್ಜಿ ಸಲ್ಲಿಸಿರುವುದು ಹಾಗೂ ಸದರಿ ದಾಖಲೆಗಳನ್ನು 1ನೇ ಎದುರುದಾರರ ಕಚೇರಿಯಿಂದ ಕೇಳಿರುವ ದಾಖಲೆಗಳನ್ನು ನೀಡದೇ ಹರಿದು ಹೋಗಿ ಶಿಥಿಲಗೊಂಡಿದ್ದು ಪ್ರತಿಗಳನ್ನು ನೀಡಲು ರಹಾ ಇರುವುದಿಲ್ಲ ಎಂದು 1ನೇ ಎದುರುದಾರರ ಕಚೇರಿಯಿಂದ ದಿನಾಂಕ: 31.12.2018ರ ಹಿಂಬರಹವನ್ನು ನೀಡಿರುವುದು ಕಂಡುಬರುತ್ತದೆ. ಇದರಿಂದ 1ನೇ ಎದುರುದಾರರ ಕಚೇರಿಯಿಂದ ದೂರುದಾರರಿಗೆ ಅವರು ಕೋರಿರುವ ದಾಖಲೆಗಳು ಸಿಗದೇ ಇರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

9. ದಿನಾಂಕ: 14.12.2021ರಂದು 1ನೇ ಎದುರುದಾರರಾದ ತಹಶೀಲ್ದಾರ್‌ರವರು ನಿಯೋಜನೆಗೊಳಿಸಿದ್ದ ಶ್ರೀ ಇರ್ಫಾನ್ ಉಲ್ಲಾ ಖಾನ್, ಕೇಸ್ ವರ್ಕರ್/ ರೆಕಾರ್ಡ್

ಕೀಪರ್, ತಾಲ್ಲೂಕು ಕಛೇರಿ, ಬೆಂಗಳೂರು ಪೂರ್ವ ತಾಲ್ಲೂಕು ರವರು ಗೌರವಾನ್ವಿತರ ಎದುರಿನಲ್ಲಿ ಹಾಜರು ಪಡಿಸಿದ್ದ ದಾಖಲೆಗಳು ಐ.ಎಲ್ ಮತ್ತು ಆರ್.ಆರ್ ದಾಖಲೆಗಳನ್ನು ಹೊಂದಿರುತ್ತವೆ ಎಂದು ಹಾಜರುಪಡಿಸಿರುವುದನ್ನು ಪರಿಶೀಲಿಸಿದಾಗ ಅವುಗಳನ್ನು ದುರಸ್ತಿ ಮಾಡದ ರೀತಿಯಲ್ಲಿ ಶಿಥಿಲಗೊಂಡಿರುವುದು ಕಂಡುಬಂದಿರುತ್ತದೆ ಮತ್ತು ಸದರಿ ವಿಷಯ ನಿರ್ವಾಹಕರು ಗುಂಜೂರು ಗ್ರಾಮದ ಸರ್ವೆ ನಂ.271/2 ರ ಐ.ಎಲ್ ಮತ್ತು ಆರ್.ಆರ್ ಪ್ರತಿಗಳನ್ನು ಕಛೇರಿಯ ಅಭಿಲೇಖಾಲಯದಲ್ಲಿ ನಿರ್ವಹಿಸಿರುವ ದಾಖಲೆಗಳಲ್ಲಿ ಹುಡುಕುವುದು ಸಾಧ್ಯವಿಲ್ಲ ಎಂದು ಹೇಳಿರುತ್ತಾರೆ. ಆದರೆ ವಾಸ್ತವಿಕವಾಗಿ ದಾಖಲೆಗಳ ಸ್ಥಿತಿಯನ್ನು ಗಮನಿಸಿದಾಗ ಸದರಿ ವಿಷಯ ನಿರ್ವಾಹಕರು ಹೇಳಿರುವ ಹೇಳಿಕೆ ನಿಜವೆಂದು ಕಂಡುಬರುವುದನ್ನು ಗೌರವಾನ್ವಿತರು ಅಭಿಪ್ರಯಿಸಿರುತ್ತಾರೆ. ಆದರೆ ತಹಶೀಲ್ದಾರ್ ಕಛೇರಿಯ ಅಭಿಲೇಖಾಲಯದಲ್ಲಿ ಬಹು ಮುಖ್ಯ ದಾಖಲೆಗಳು ಆ ಮಟ್ಟಿಗೆ ಶಿಥಿಲಗೊಳ್ಳುವ ರೀತಿಯಲ್ಲಿ ನಿರ್ವಹಿಸಿರುವುದು ತಿಳಿಯದೇ ಇರುವುದಾಗಿರುತ್ತದೆ ಹಾಗೂ ದಾಖಲೆಗಳ ಆ ಮಟ್ಟದ ಶಿಥಿಲೀಕರಣಕ್ಕೆ ದಾಖಲೆಗಳನ್ನು ನಿರ್ವಹಿಸುವಲ್ಲಿ ತೋರಿರುವ ನಿರ್ಲಕ್ಷ್ಯತೆಯೇ ಕಾರಣ ಆಗಿರುವುದು ಕಂಡುಬರುತ್ತದೆ. ದಾಖಲೆಗಳು ಶಿಥಿಲವಾಗುವುದನ್ನು ಹಾಗೂ ಹರಿದು ಹೋಗುವುದನ್ನು ವಿವಿಧ ರೀತಿಯ ಕ್ರಮಗಳಿಂದ ತಡೆಯಬಹುದಿತ್ತು. ಅಂದರೆ ಮೂಲ ದಾಖಲೆಯಿಂದ ಅವುಗಳ ಪ್ರತಿಯನ್ನು ಪಡೆದು ಪ್ಯಾರಲೆಲ್ ದಾಖಲೆಗಳ ನಿರ್ವಹಣೆಯನ್ನು ಮಾಡುವ ಮೂಲಕ ದಾಖಲೆಗಳ ಸರಿಯಾದ ನಿರ್ವಹಣೆ ಮಾಡಬಹುದಾಗಿತ್ತು ಎನ್ನುವುದು ಕಂಡುಬರುತ್ತದೆ. ಕಂದಾಯ ಇಲಾಖೆಗೆ ಸಂಬಂಧಪಟ್ಟ ಮುಖ್ಯ ದಾಖಲೆಗಳ ನಿರ್ವಹಣೆಯಲ್ಲಿ ಸರಿಯಾದ ಕ್ರಮವನ್ನು ತೆಗೆದುಕೊಳ್ಳಲು ಯಾವುದೇ ತರಹದ ಎಚ್ಚರಿಕೆ, ಜಾಗರೂಕತೆ, ಪ್ರಾಮಾಣಿಕತೆ ಹಾಗೂ ಬದ್ಧತೆಯನ್ನು ಸಂಬಂಧಪಟ್ಟ ಅಧಿಕಾರಿಗಳು ಪ್ರದರ್ಶಿಸಿ ಸರಿಯಾದ ಕ್ರಮ ಕೈಗೊಳ್ಳದೇ ಇರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. 1ನೇ ಎದುರುದಾರರಾದ ಕೆ.ಆರ್. ಪುರಂ ಬೆಂಗಳೂರು ಪೂರ್ವ ತಾಲ್ಲೂಕಿನ ತಹಶೀಲ್ದಾರ್ ರವರ ಕಛೇರಿಯಲ್ಲಿ ದಾಖಲೆಗಳು ಹಾಳಾಗಿರುವ ಬಗ್ಗೆ ಕೇವಲ ಒಂದು

ಅವಧಿಯ ಅಧಿಕಾರಿ ಮತ್ತು ಅಭಿಲೇಖಾಲಯ ಶಾಖೆಯ ಸಿಬ್ಬಂದಿಗಳನ್ನು ಕಾರಣ ಕರ್ತರು ಎಂದು ಹೇಳಲು ಆಗುವುದಿಲ್ಲ. ಆದರೆ ಸದರಿ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ತಹಶೀಲ್ದಾರ್‌ರವರು ತಮ್ಮ ಅಧೀನ ಅಧಿಕಾರಿಗಳ ಮೇಲ್ವಿಚಾರಣೆ ಮಾಡಿ ಅವರಿಂದ ಕೆಲಸ ಪಡೆದುಕೊಳ್ಳುವ ಹೊಣೆಗಾರಿಕೆ ಹೊಂದಿರುತ್ತಾರೆ. ಆದರೆ ಪ್ರಸ್ತುತ ಪ್ರಕರಣಕ್ಕೆ ಸಂಬಂಧಪಟ್ಟಂತೆ ದೂರುದಾರರು ಕೋರಿರುವ ದಾಖಲೆಗಳ ನಿರ್ವಹಣೆಯಲ್ಲಿ ಸಂಬಂಧಪಟ್ಟ ತಹಶೀಲ್ದಾರ್‌ರವರು ಇಂಥಹ ಯಾವುದೇ ಮೇಲ್ವಿಚಾರಣೆ ಅಥವಾ ಕ್ರಮ ಕೈಗೊಳ್ಳದೇ ಇರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಈ ಕ್ರಮವು ಮುಂದುವರೆಯಲು ಬಿಟ್ಟಿದ್ದೇ ಆಗಿದ್ದಲ್ಲಿ ಇದು ಸಾರ್ವಜನಿಕರಿಗೆ ತುಂಬಾ ಅನಾನುಕೂಲ ಉಂಟು ಮಾಡುತ್ತದೆ. ಆದ್ದರಿಂದ ತಹಶೀಲ್ದಾರ್ ಕಛೇರಿಗಳ ಅಭಿಲೇಖಾಲಯದಲ್ಲಿ ದಾಖಲೆಗಳ ಶೇಖರಣೆ ಮತ್ತು ನಿರ್ವಹಣೆಯ ಬಗ್ಗೆ ಸೂಕ್ತ ಕ್ರಮವನ್ನು ಕೈಗೊಳ್ಳುವಂತೆ, ಪ್ರಸ್ತುತ ಪ್ರಕರಣಕ್ಕೆ ಸಂಬಂಧಪಟ್ಟಂತೆ ಗುಂಜೂರು ಗ್ರಾಮದ ಐ.ಎಲ್ ಮತ್ತು ಆರ್.ಆರ್. ದಾಖಲೆಗಳು ಹರಿದು ಶಿಥಿಲಗೊಂಡು ಅವುಗಳು ದುರಸ್ತಿ ಮಾಡದ ಸ್ಥಿತಿಗೆ ತಲುಪಲು ಕಾರಣಕರ್ತರಾದ 1ನೇ ಎದುರುದಾರ ತಹಶೀಲ್ದಾರ್ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸಿರುವ ಅಧಿಕಾರಿ ಹಾಗೂ ಸಿಬ್ಬಂದಿಗಳನ್ನು ಗುರುತಿಸಿ ಅವರ ವಿರುದ್ಧ ಸೂಕ್ತ ಕ್ರಮ ಇಲಾಖೆಯಿಂದ ಜರುಗಿಸುವಂತೆ ಮತ್ತು ಪ್ರಸ್ತುತ ಪ್ರಕರಣಕ್ಕೆ ಸಂಬಂಧಪಟ್ಟ ಸರ್ವೆ ನಂ.271/2ರ ಸ್ವತ್ತಿನ ಐ.ಎಲ್.ಆರ್.ಆರ್ ದಾಖಲೆಗಳಿಗೆ ಪೂರಕವಾದ ದಾಖಲೆಗಳನ್ನು ಪ್ರಸ್ತುತ ದೂರುದಾರರಿಗೆ ಒದಗಿಸಲು ಕ್ರಮ ಕೈಗೊಂಡು ದೂರುದಾರರ ಸಮಸ್ಯೆ ಪರಿಹರಿಸಲು ಕ್ರಮ ಕೈಗೊಳ್ಳುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ರ ಕಲಂ 12(1)ರ ವರದಿಯನ್ನು ಸಕ್ಷಮ ಪ್ರಾಧಿಕಾರಕ್ಕೆ ಪ್ರದತ್ತವಾದ ಅಧಿಕಾರದಡಿ ಶಿಫಾರಸ್ಸು ಮಾಡುವುದು ಸೂಕ್ತ ಎನ್ನುವ ಅಭಿಪ್ರಾಯಕ್ಕೆ ಬರುವಂತಹ ಅಂಶಗಳು ಈ ಪ್ರಕರಣದಲ್ಲಿ ಮೇಲ್ನೋಟಕ್ಕೆ ಕಂಡುಬರುತ್ತದೆ.

10. ಆದುದ್ದರಿಂದ, ತಹಶೀಲ್ದಾರ್ ಕಛೇರಿಗಳ ಅಭಿಲೇಖಾಲಯದಲ್ಲಿ ದಾಖಲೆಗಳ ಶೇಖರಣೆಯ ಮತ್ತು ನಿರ್ವಹಣೆಯ ಬಗ್ಗೆ ಸೂಕ್ತ ಕ್ರಮವನ್ನು ಕೈಗೊಳ್ಳುವಂತೆ, ಪ್ರಸ್ತುತ ಪ್ರಕರಣಕ್ಕೆ ಸಂಬಂಧಪಟ್ಟಂತೆ ಗುಂಜೂರು ಗ್ರಾಮದ ಸರ್ವೆ ನಂ. 271/2ರ ಸ್ವತ್ತಿನ ಐ.ಎಲ್ ಮತ್ತು ಆರ್.ಆರ್. ದಾಖಲೆಗಳು ಹರಿದು ಶಿಥಿಲಗೊಂಡು ಅವುಗಳು ದುರಸ್ತಿ ಮಾಡದ ಸ್ಥಿತಿಗೆ ತಲುಪಲು ಕಾರಣಕರ್ತರಾದ 1ನೇ ಎದುರುದಾರರ/ತಹಶೀಲ್ದಾರ್ ರವರ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸಿರುವ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ಗುರುತಿಸಿ ಅವರ ವಿರುದ್ಧ ಸೂಕ್ತ ಕ್ರಮ ಇಲಾಖೆಯಿಂದ ಜರುಗಿಸುವಂತೆ ಮತ್ತು ಪ್ರಸ್ತುತ ಪ್ರಕರಣಕ್ಕೆ ಸಂಬಂಧಪಟ್ಟ ಗುಂಜೂರು ಗ್ರಾಮದ ಸರ್ವೆ ನಂ.271/2ರ ಸ್ವತ್ತಿನ ಐ.ಎಲ್.ಆರ್.ಆರ್ ದಾಖಲೆಗಳಿಗೆ ಪೂರಕವಾದ ದಾಖಲೆಗಳನ್ನು ಪ್ರಸ್ತುತ ದೂರುದಾರರಾದ ಶ್ರೀಮತಿ ಪಿಳ್ಳರತ್ನಮ್ಮರವರಿಗೆ ಒದಗಿಸಲು ಕ್ರಮ ಕೈಗೊಂಡು, ದೂರುದಾರರ ಸಮಸ್ಯೆ ಪರಿಹರಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ರ ಕಲಂ 12(1) ರಡಿಯಲ್ಲಿ ವರದಿಯನ್ನು ಪ್ರದತ್ತವಾದ ಅಧಿಕಾರದಡಿಯಲ್ಲಿ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

11. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರ ಪ್ರಕಾರ ಶಿಸ್ತು ಪ್ರಾಧಿಕಾರವು, ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ಅನುಸಾರಣಾ ವರದಿಯನ್ನು ಸಲ್ಲಿಸುವಂತೆ ಕೋರಲಾಗಿದೆ. ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಲಾಗಿದೆ.

17/5/22

[ ನ್ಯಾಯಮೂರ್ತಿ ಬಿ.ಎಸ್.ಪಾಟೀಲ್ ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ,
ಬೆಂಗಳೂರು.